ಕಡಿಮೆ ಮಾತನಾಡುವ ಮುನವ್ವರ್ ಜೋಗಿಬೆಟ್ಟು ತಮ್ಮೂರು ದಕ್ಷಿಣ ಕನ್ನಡದ ಉಪ್ಪಿನಂಗಡಿಯ ಮೋಹವನ್ನು ಬಿಡಲಾರದವರು. ದಟ್ಟಹಸಿರಿನ ಕಾಡು, ಪ್ರಾಣಿ ಪ್ರಪಂಚ, ಪರಿಸರವನ್ನು ಬಹುವಾಗಿ ಪ್ರೀತಿಸುವ ಅವರ ಈ ಗುಣಕ್ಕೆ ಅವರ ಉಮ್ಮನೇ ಗುರು. 'ಮೊಗ್ಗು' ಮತ್ತು ' ಇಶ್ಕಿನ ಒರತೆಗಳು' ಕವನ ಸಂಕಲನಗಳು ಪ್ರಕಟವಾಗಿವೆ. ಕಾದಂಬರಿ ಮತ್ತು ಕಥೆಗಳನ್ನು ಬರೆದಿದ್ದು ಪ್ರಕಟಣೆಯ ನಿರೀಕ್ಷೆಯಲ್ಲಿದ್ದಾರೆ. ಸದ್ಯ ಮಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಫೈನಾನ್ಸ್ ಎಕ್ಸಿಕ್ಯೂಟಿವ್.

ತುಂಬಿದ್ದ ನಿರೋಧನ್ನು ಕಡಲಬದಿಗೆ ಚೆಲ್ಲಿ ಹುಡುಗರೆಲ್ಲ ಚೆಲ್ಲಾಪಿಲ್ಲಿಯಾಗಿ ಚದುರುತ್ತಾ ಓಡತೊಡಗಿದರು.

'ಚುತ್ತುಕೊರೊಡಿ ನಿಮ್ಮ ಅಪ್ಪನಿಗೆ ಬ್ಯಾವರ್ಸಿಗಳೇ' ಎಂದು ಅವಳು ಕಡುಕೋಪದಲ್ಲೊಮ್ಮೆ ಗದರಿಸುತ್ತಾ ಎಳೆದು ಮುಗಿದ ಬೀಡಿಯ ಬಾಲವನ್ನು ನೆಲಕ್ಕೆಸೆದು ಓಡುವ ಮಕ್ಕಳನ್ನು ನೋಡುತ್ತಾ ಗಹಗಹಿಸಿ ನಗುತ್ತಾ ಅವಳು ನಿಂತಳು. ಅದಾಗಲೇ ಕತ್ತಲಾವರಿಸತೊಡಗಿತ್ತು. ಜನ್ನತ್ ಆ ಚುತ್ತುಕೊರೊಡಿಯ ಅವತಾರ ನೋಡಿ ಅಚ್ಚರಿಗೊಂಡ. ಅವನು ಅವಳನ್ನೇ ದಿಟ್ಟಿಸುತ್ತಾ ಕೂತರೆ, ಅವಳು ಅವನನ್ನು ನೋಡಿಯೂ ನೋಡದಂತೆ ಬಂದು ಅವನು ಕುಳಿತಿದ್ದ ಬಂಡೆಯ ಹತ್ತಿರದಲ್ಲಿಯೇ ಆಸೀನಳಾದಳು. ನಡೆದು ಬಸವಳಿದ ಪಾದ, ಅಲ್ಲಲ್ಲಿ ಹಡಿಲು ಬಿದ್ದ ಭೂಮಿಯಂತೆ ಒಡೆದು ಹೋಗಿದ್ದು ಕಾಣುತ್ತಿತ್ತು. ಮಾಸಲು ಬುರ್ಖಾ ತೊಳೆಯದೆ ಎಷ್ಟು ವರ್ಷಗಳಾಗಿದ್ದವೋ ಏನೋ. ಅವಳ ಮುಖದ ಮೇಲೆ ಸುಕ್ಕುಗಟ್ಟಿದ ಚರ್ಮ ಎದ್ದು ಕಾಣುತ್ತಿತ್ತು. ಸುಮಾರು ಐವತ್ತು ಐವತ್ತೈದರಷ್ಟು ಪ್ರಾಯವಿರಬಹುದು. 'ಈ ಚುತ್ತು ಕೊರೊಡಿ - ಅಂದರೆ ಸ್ಥಳೀಯ ಬ್ಯಾರಿ ಭಾಷೆಯಲ್ಲಿ ಮಾನಸಿಕ ರೋಗಿ ಅಂತ. ಯಾರೀಕೆ? ನಿರೋಧ್ ಬಗ್ಗೆ ಈ ಇವಳಿಗೆ ಹೇಗೆ ಗೊತ್ತು? ಗಂಡುಬೀರಿಯಂತೆ ಹಾಡು ಹಗಲೇ ಬೀಡಿ ಸೇದುತ್ತಾಳೆ ಬೇರೆ, ಸೂಳೆ- ಗೀಳೆ ಛೇ ಛೆ... ನಮ್ಗದೆಲ್ಲಾ ಯಾಕೆ' ಅವನು ಯೋಚನಾ ಲೋಕಕ್ಕೆ ಪ್ರವೇಶಿಸಿದನೋ ಇಲ್ಲವೋ, ಅಷ್ಟರಲ್ಲಿ ಅವಳ ಧ್ವನಿ ಎಚ್ಚರಿಸಿತು.

'ಓಯ್... ಬೀಡಿ ಉಂಟಾ?'

'ಹಾ... ಏನು?' ಜನ್ನತ್ ತಡವರಿಸಿದ.

'ಬೀಡಿ ಬೀಡಿ... ಉಂಟಾ ಅಂತ ಕೇಳಿದೆ'

'ಬೀ... ಬೀಡಿ ಇಲ್ಲ... ಸಿಗರೇಟು ಉಂಟು ಆಗದಾ?'

'ಹಾ ಸಿಕ್ರೇಟ್ ಆದರೆ ಸಿಕ್ರೇಟು ಕೊಡು ಕೊಡು...'

ಜನ್ನತ್ ಕಿಸೆಯಲ್ಲಿದ್ದ ಎರಡು ವಾರದ ಹಿಂದೆ ತೆಗೆದಿರಿಸಿದ್ದ ಹೊಸ ಸಿಗರೇಟ್ ಪ್ಯಾಕಿನಿಂದ ಒಂದು ಸಿಗರೇಟೆಳೆದು ಕೊಟ್ಟ.

'ಕಡ್ಡಿ ಉಂಟಾ?'

'ಕ... ಕಡ್ಡಿ ಇಲ್ಲ... ಸಿಗರ್‌ಲೈಟ್ ಉಂಟು'

'ಸರಿ ಇದು ಹಚ್ಚಿ ಕೊಡು'

ಅವಳ ದಿಟ್ಟತನ- ತೊಡರಿಲ್ಲದೆ ಅಪರಿಚಿತನೊಂದಿಗಿನ ಮಾತನ್ನು ಕೇಳಿ ಅಚ್ಚರಿಯಿಂದಲೇ ಸಿಗರೇಟು ಹಚ್ಚಿ ಕೊಟ್ಟ. ಅವಳು ಸಿಗರೇಟನ್ನು ತುಟಿಗೇರಿಸಿದಳು. ಬೀಡಿಯೆಳೆದು ಕಪ್ಪಿಟ್ಟ ತುಟಿ. ಹಳದಿ ಬಣ್ಣಕ್ಕೆ ತಿರುಗಿದ ಹಲ್ಲುಗಳೆಡೆಯಲ್ಲಿ ಗೆಳೆಯ ಹೇಳಿಕೊಟ್ಟ ಕಥೆ ಬರೆಯುವ ಅಸ್ತ್ರವೊಂದು ಕರಗಿ ಹೋಗುತ್ತಿತ್ತು.

ವಾರಪತ್ರಿಕೆಯೊಂದರಲ್ಲಿ ಕಥೆ ಬರೆಯುತ್ತಿದ್ದ ಜನ್ನತ್‌ಗೆ ಇತ್ತೀಚೆಗೆ ಯಾವುದೇ ಕಥೆ ಹೊಳೆಯದಾದಾಗ ಗೆಳೆಯನೊಬ್ಬ 'ಸಿಗರೇಟು ಎಳಿಬೇಕು ಮಾರಾಯ, ಎಂಥ ಕಥೆ ಬೇಕಾದ್ರೂ ಬರ್ತದೆ. ಈ ದೊಡ್ಡ ದೊಡ್ಡ ಸಾಹಿತಿಗಳೆಲ್ಲಾ ಸಿಗರೇಟು ಸೇದುವುದು ಗೊತ್ತಿಲ್ವಾ. ನೀನೂ ಒಮ್ಮೆ ಸಿಗರೇಟು ಸೇದಿ ನೋಡು' ಅಂತ ಪುಗಸಟ್ಟೆ ಸಲಹೆ ಕೊಟ್ಟು, ವಾರಗಳ ಹಿಂದೆ ಹುಟ್ಟದ ಕಥೆಗಾಗಿ ಅಲೆದಾಡಿ ಸಿಗರೇಟು ಎಳೆಯುವುದೇನೂ ಇಷ್ಟವಿಲ್ಲದಿದ್ದರೂ, ಈ ಒತ್ತಡದಿಂದ ಹೊರ ಬರಬೇಕೆಂದು ಸಿಗರೇಟು ಪ್ಯಾಕೊಂದು ಕೊಂಡುಕೊಂಡನಾದರೂ ಸೇದುವ ಧೈರ್ಯ ಮಾಡಿರಲಿಲ್ಲ. ಹಾಗೆಯೇ ಉಳಿದು ಹೋದ ಪೊಟ್ಟಣದ ಮೊದಲ ಸಿಗರೇಟು ಆ ಆಗಂತುಕ ಮಹಿಳೆಯ ತುಟಿಗಳಲ್ಲಿ ಕನಲುತ್ತಿತ್ತು. ಅವಳು ಸಿಗರೇಟಿನ ಒಂದೊಂದು ದಮ್ ಅನ್ನೂ ಗುಟುಕರಿಸಿಕೊಂಡು ಸ್ವಲ್ಪ ಶ್ವಾಸಕೋಶಕ್ಕೆ, ಮಿಕ್ಕಿದ್ದನ್ನು ಮೂಗಿನಿಂದ ಹೊರಬಿಡುತ್ತಿದ್ದಂತೆ ಕುಕ್ಕರ್ ಸೀಟಿ ಊದಿದಂತಹ ಸದ್ದಿನೊಂದಿಗೆ ಕಳೆದು ಹೋಗುತ್ತಿದ್ದಳು.